# ಕ್ಷಮೆ ಯಾಚಿಸಿದ ಬನಿಯ

ಎಚ್.ಎನ್. ಸೋಮಸುಂದರಂ

ಇದು ಸ್ವಾಮಿ ವಿವೇಕಾನಂದರ ಜೀವನದ ಘಟನೆಯೊಂದನ್ನಾಧರಿಸಿದ ಮಕ್ಕಳ ಕಿರುನಾಟಕ. ಈ ನಾಟಕವನ್ನು ಶಾಲೆಯ ಮಟ್ಟದಲ್ಲಿ ಪ್ರಯೋಗ ಮಾಡಿ ಸ್ವಾಮಿ ವಿವೇಕಾನಂದರ ಪರಿಚಯ ಮಾಡಬಹುದು. ಲೇಖಕರು ಬೆಂಗಳೂರಿನ ನಿವಾಸಿಗಳು, ಸೇವಾಕಾರ್ಯಕರ್ತರು ಮತ್ತು ಆಶ್ರಮದ ಭಕ್ತರು.

(ಹಿಂದಿನಿಂದ ಹಾಡು ಕೇಳಿಬರುವುದು)

ಶ್ರೀವಿವೇಕಾನಂದ ಗುರುವರ ನವಯುಗಾಚಾರ್ಯ
ರಾಮಕೃಷ್ಣರ ಪ್ರೇಮಶಿಷ್ಯನೆ, ವೀರವೇದಾಂತಿ
ಭಾರತಾಂಬೆಯ ಧೀರಪುತ್ರನೆ, ಸಾಧುಭೈರವನೆ
ಸ್ಥೈರ್ಯದಚಲವೆ, ಧೈರ್ಯದಂಬುಧಿ
ಜಯತು ಜಯ ಜಯತು॥
ಚಿದ್ ಋತಾಗ್ನಿಯ ಚಂಡಕಾಂತಿಯೆ, ಮೇರುಸಂನ್ಯಾಸಿ
ಭರತಖಂಡದ ನಂದಿದಿದ್ದಲಿಗಿತ್ತೆ ತೇಜವನು
ಬೊಮ್ಮದಂಬುಧಿಗಲೆಯನೀಯುವ ಭರದ ಬಿರುಗಾಳಿ
ಬೂದಿ ಮುಚ್ಚಿದ ಭರತಭೂಮಿಯನೂದಿ ಬೆಳಗಿಸಿದೆ॥
ಭರತಖಂಡದೊಳರಚುತಲೆಯುವ ಮನುಜಕುರಿಗಳಿಗೆ
ಸಿಂಹಹೃದಯವನಿತ್ತು ಗರ್ಜಿಸುವಂತೆ ನೀ ಮಾಡಿ
ಕುರಿಯ ದೊಡ್ಡಿಯ ಮುರಿದು ಸಿಂಹದ
ಗುಹೆಯ ವಿರಚಿಸಿದೆ
ಸಿಂಹಹೃದಯನೆ, ಶ್ರೀವಿವೇಕಾನಂದ ಯೋಗೀಂದ್ರ॥

### ದೃಶ್ಯ ೧ - ಓದುವ ಕೊಠಡಿ

(ಪ್ರವೇಶ: ಇಬ್ಬರು ಬಾಲಕರು, ಒಬ್ಬಳು ಬಾಲಕಿ: ಇಲ್ಲಿ ರಾಮು, ಶ್ಯಾಮು, ಶಾರದೆ. ಶ್ಯಾಮನ ಕೈನಲ್ಲಿ ಪುಸ್ತಕ)

**ಶಾರದೆ:** ರಾಮು, ಶ್ಯಾಮು, ನೀವು ಬೆಳಗಿನಿಂದ ಅಷ್ಟೊಂದು ಓದುತ್ತಾ ಇದ್ದೀರಲ್ಲ, ಆ ಪುಸ್ತಕ ಯಾವುದು ಹೇಳ್ರೋ!

**ರಾಮು:** ಹ್ಹಾ! ಈ ಪುಸ್ತಕ ಸ್ವಾಮಿ ವಿವೇಕಾನಂದರ ಜೀವನ. ಓದ್ತಾ ಇದೀನಿ, ಎಷ್ಟು ಚೆನ್ನಾಗಿದೆ ಗೊತ್ತಾ?

**ಶ್ಯಾಮು:** ನಾವು ಈಗಾಗಲೇ ಅದನ್ನು ಓದಿ ತುಂಬಾ ವಿಚಾರ ತಿಳಿದುಕೊಂಡಿದ್ದೀವಿ.

**ಶಾರದೆ:** ಅದೇನು, ನನಗೂ ಹೇಳೋ.

**ಶ್ಯಾಮು:** ಇಲ್ಲಮ್ಮ! ಬೇಕಾದರೆ ನೀನೆ ಓದಿಕೋ.

**ರಾಮು:** ಅದನ್ನು ನಾನು ಹೇಳ್ತೀನಿ. ಆಮೇಲೆ ನೀನೂ ಸಹ ಓದುವಿಯಂತೆ. ಇಲ್ಲಿ ಕೇಳು, ಸ್ವಾಮಿ ವಿವೇಕಾನಂದರು ನಮ್ಮ ದೇಶದ ಒಬ್ಬ ಮಹಾಪುರುಷರು.

**ಶ್ಯಾಮು:** ಮಹಾಪುರುಷರು ಅಂದರೇನೇ ದೊಡ್ಡವರಲ್ಲವಾ?

**ರಾಮು:** ಹೌದು, ಆದರೆ ಸ್ವಾಮಿ ವಿವೇಕಾನಂದರ ಬಹುಮುಖ ಪ್ರಭಾವ ವಿಶೇಷವಾಗಿ ಕಂಡದ್ದರಿಂದ ಹಾಗೆ ಹೇಳಿದೆ. ಸರಿ, ಅವರ ಬಾಲ್ಯದ ಹೆಸರು, ತಾಯಿ ತಂದೆಯರ ಹೆಸರನ್ನು ನೀನು ಹೇಳು.

**ಶ್ಯಾಮು:** ವಿವೇಕಾನಂದರ ಬಾಲ್ಯದ ಹೆಸರು ನರೇಂದ್ರ. ಅವರ ತಾಯಿ ಭುವನೇಶ್ವರೀ ದೇವಿ; ತಂದೆ ವಿಶ್ವನಾಥದತ್ತ.

**ರಾಮು:** ಸರಿ. ಅವರ ಗುರುಗಳೇ ಆಧುನಿಕ ಭಾರತದ ಶ್ರೇಷ್ಠ ಸಂತರೆಂದು ಪ್ರಸಿದ್ಧರಾಗಿರುವ ಶ್ರೀರಾಮಕೃಷ್ಣ ಪರಮಹಂಸರು. ಕಾಲೇಜು ದಿನಗಳಲ್ಲಿಯೇ ಗುರುಗಳ ಬಳಿ ಬಂದ ವಿವೇಕಾನಂದರು ಶ್ರೀರಾಮಕೃಷ್ಣರು ಕಾಲವಾದ ನಂತರ ಅವರ ಆದೇಶದಂತೆ ಮಿಕ್ಕ ಎಲ್ಲಾ ಶಿಷ್ಯರನ್ನು ಹುರಿದುಂಬಿಸಿ ಒಟ್ಟುಗೂಡಿಸಿದರು.

**ಶ್ಯಾಮು :** ಕೆಲವು ಕಾಲದ ನಂತರ ಅವರಲ್ಲಿ ಕೆಲವರು ಪರಿವ್ರಾಜಕರಾಗಿ ಹೊರಟರು.

**ಶಾರದೆ :** ಪರಿವ್ರಾಜಕ ಅಂದರೇನೋ?

**ರಾಮು :** 'ಪರಿವ್ರಾಜಕ' ಅಂದರೆ ಒಂದೆಡೆ ನಿಲ್ಲದೆ ಸಂಚರಿಸುವವರು. ಸ್ವಾಮಿ ವಿವೇಕಾನಂದರು ಪರಿವ್ರಾಜಕ ಸಂನ್ಯಾಸಿಯಾಗಿ ಹೊರಟರು. ಭಾರತದ ಉದ್ದಗಲಕ್ಕೂ ಸಂಚರಿಸಿದರು.

**ಶ್ಯಾಮು :** ಒಂದು ದಿನ ರಾಜಮಹಾರಾಜರ ಮನೆಯಲ್ಲಿ ಊಟ, ಮತ್ತೊಂದು ದಿನ ಉಪವಾಸ. ಮತ್ತೊಂದು ದಿನ ಏನು? ಎಷ್ಟೋ ದಿನ ಉಪವಾಸವೇ. ಬರಿಯ ನೆಲದ ಮೇಲೆ ಮಲಗುವುದೇ!

**ರಾಮು :** ಸ್ವಾಮಿ ವಿವೇಕಾನಂದರು ಹೀಗೆ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ಬಹುಮಟ್ಟಿಗೆ ಕಾಲುನಡಿಗೆಯಿಂದ ಭಾರತದಲ್ಲಿ ಸಂಚರಿಸುತ್ತಿದ್ದರು. ಆಗ ಒಂದು ವಿಶೇಷ ಘಟನೆ ನಡೆಯಿತು.

**ಶಾರದೆ :** ಹ್ಹಾ, ಆ ಘಟನೆ ತಿಳಿಯಲು ನನಗೆ ಕುತೂಹಲ; ಅದೇನು ಹೇಳೋ.

**ರಾಮು :** ಅದು ನಡೆದುದು ರೈಲ್ವೆ ಸ್ಟೇಷನ್ ಒಂದರಲ್ಲಿ; ಅಲ್ಲಿ ನೋಡು, ಸ್ವಾಮಿ ವಿವೇಕಾನಂದರು ರೈಲಿನಲ್ಲಿ ಹೋಗುತ್ತಿದ್ದಾರೆ.

**ಶ್ಯಾಮು :** ರೈಲಿನ ಶಬ್ದ: ಕೆಲವೇ ಪ್ರಯಾಣಿಕರು. ಅವರಲ್ಲಿ ಒಬ್ಬರು ವಿವೇಕಾನಂದರು; ಇನ್ನೊಬ್ಬ ಬನಿಯ, ಅಂದರೆ ವ್ಯಾಪಾರಿ. ಲಾಭ ಮಾಡುವ ಬನಿಯ ಈತ; ನೋಡು, ಎಷ್ಟು ಜಂಬ ಕೊಚ್ಚಿಕೊಳ್ಳುತ್ತಿದ್ದಾನೆ.

**ರಾಮು :** ಇತ್ತ ವಿವೇಕಾನಂದರಿಗೆ ಕುಡಿಯಲು ನೀರೂ ಸಹ ಇಲ್ಲ. ನೀರನ್ನು ಕೊಂಡೊಯ್ಯಲು ಕಮಂಡಲು ಕೂಡ ಅವರಲ್ಲಿ ಇರಲಿಲ್ಲ. ಇನ್ನು ಊಟದ ಮಾತೆಲ್ಲಿ?

**ಶ್ಯಾಮು :** ಇರಲಿ, ತಾರೀಘಾಟ್ ಸ್ಟೇಷನ್ ಬಂತು. ಭರ್ಜರಿ ಊಟ ತಂದಿದ್ದ ಬನಿಯ. ಅಲ್ಲಿ ಇದ್ದ ಒಂದೇ ಮರದ ನೆರಳಿನಲ್ಲಿ ಜಮಖಾನ ಹಾಸಿ ಆರಾಮವಾಗಿ ಕುಳಿತ. ವಿವೇಕಾ

ನಂದರು ಬಿಸಿಲಿನಲ್ಲಿ ನಿಂತೇ ಇದ್ದಾರೆ.

**(ರಾಮ, ಶ್ಯಾಮ, ಶಾರದೆ ಹಿಂದೆ ಸರಿಯುವರು)**

(ಹಿಂದಿನಿಂದ ಹಾಡು ಕೇಳಿಬರುವುದು.)

ನಿಶೆಯ ಗಗನದೊಳಿರುವ ತಾರೆಯ ತೆರದಿ ರಂಜಿಸಿದೆ
ಜಗದ ಕಂಗಳು ನೋಡಲಾರದೆ ನಿನ್ನ ತೇಜವನು
ವಿಸ್ಮಯಾಶ್ಚರ್ಯದಲಿ ನಿಂತವು ಮೂಗುವೆರಗಾಗಿ
ನಿನ್ನ ಮಹಿಮೆಯ ಸವಿವ ಸೆರೆಯೇ ಮುಕ್ತಿ, ವರಯೋಗಿ ॥
ಮೊರೆದು ಗರ್ಜಿಪ ಕಡಲವಾಣಿಯು ನಿನ್ನ ವರವಾಣಿ
ಕಾರಮಿಂಚನು ನಗುವ ತೇಜವು ನಿನ್ನ ಮೈಕಾಂತಿ.
ಆಳವಂಬುಧಿಯಾಳ, ಮೇರೆಯು ನಭದ ವಿಸ್ತಾರ
ಮಂದರಾದ್ರಿಯ ಮೀರಿದಚಲನು ನೀನು, ಯೋಗೀಂದ್ರ ॥

**ದೃಶ್ಯ ೨ : ರೈಲ್ವೆ ನಿಲ್ದಾಣ; ತಾರೀಘಾಟ್ ಎಂಬ ಫಲಕ**

(ಬನಿಯ, ಸ್ವಾಮಿ ವಿವೇಕಾನಂದರು ನಿಲ್ದಾಣದಲ್ಲಿ)

ಬನಿಯ (ವಿವೇಕಾನಂದರ ಕಡೆ ನೋಡುತ್ತಾ) : ನಾನು ಒಬ್ಬ ವ್ಯಾಪಾರಿ. ಯಾವಾಗಲೂ ಕಷ್ಟಪಟ್ಟು ದುಡಿಯುತ್ತೇನೆ. ಆದ್ದರಿಂದಲೇ ಇಷ್ಟು ಹಣ ಸಂಪಾದಿಸಿದ್ದೇನೆ. ಹೇಳಿ ಕೇಳಿ ನಾನು ವ್ಯಾಪಾರಿ; ನನಗೆ ಸೋಮಾರಿಗಳನ್ನು ಕಂಡರಾಗದು. ಈ ಸಾಧುಗಳು ನಮ್ಮಂತೆ ಬಿಸಿನೆಸ್ ಮಾಡಬಾರದೆ? ಇಲ್ಲ; ಅವರು ಸೋಮಾರಿಗಳು, ಸುಮ್ಮನೆ ಧರ್ಮೋಪದೇಶ ಮಾಡುತ್ತಾರೆ. ಹೇ ಸಾಧು, ನೀನೂ ನಮ್ಮಂತೆ ಏಕೆ ಕೆಲಸ ಮಾಡಬಾರದು? ಹಣವನ್ನು ಸಂಪಾದಿಸಬಾರದು? ನೋಡಿದರೆ ಯುವಕನಂತಿರುವೆ, ಕಟ್ಟುಮಸ್ತಾದ ಶರೀರವಿದೆ!

(ತಿರಸ್ಕಾರದಿಂದ ಭಿಕ್ಷುಕನನ್ನು ನೋಡುವಂತೆ ಅವರತ್ತ ನೋಡುತ್ತಾನೆ. ವಿವೇಕಾನಂದರು ಅವನ ಅಜ್ಞಾನಕ್ಕೆ ಮರುಗಿ ನಸುನಕ್ಕು ಸುಮ್ಮನಾಗುವರು.)

ಬನಿಯ : ಅಲ್ಲ, ನಾನೆಷ್ಟು ಹೀಯಾಳಿಸಿದರೂ ಇವನಿಗೆ ಕೋಪವೇ ಬರುವುದಿಲ್ಲವಲ್ಲಾ! ಇರಲಿ, ಮಾಡುತ್ತೇನೆ.

(ದೊಡ್ಡ ಪಾತ್ರೆಯಿಂದ ತಿಂಡಿಯನ್ನು ತಿನ್ನುತ್ತಾ), ಇಲ್ಲಿ ನೋಡು, ಇದು ಪೂರಿ (ತಿನ್ನುವನು). (ಒಂದೊಂದಾಗಿ ತೆಗೆದು) ಇದು ಲಾಡು, ಇದು ಜಿಲೇಬಿ. ಎಷ್ಟು ಸಿಹಿಯಾಗಿದೆ! ಇದು ನೀರು. ಎಷ್ಟು ತಂಪಾಗಿದೆ; ಈ ಬಿಸಿಲಿಗೆ ತಣ್ಣನೆಯ ನೀರಿಲ್ಲದಿದ್ದರೆ ಗತಿಯೇನು? ದುಡ್ಡಿಲ್ಲದಿದ್ದರೆ ನಾನೂ ಸಹ ಈ ಸಾಧುವಿನ ಹಾಗೆ ಬಾಯಾರಿಕೊಂಡು ಇರಬೇಕಾಗಿತ್ತು. ಅಹಹಹಹಾ. ಕಣ್ಣಿಗೆ ಕಾಣುವ ಈ ಪ್ರಪಂಚದ ಸುಖಭೋಗಗಳನ್ನು ಬಿಟ್ಟು ಅದ್ಯಾವುದೋ ದೇವರಂತೆ, ವೇದಾಂತವಂತೆ, ಸ್ವರ್ಗ, ಮುಕ್ತಿ– ಇನ್ನೂ ಏನೇನೋ!

(ಸ್ವಾಮಿ ವಿವೇಕಾನಂದರು ನಿರ್ಲಿಪ್ತರಾಗಿ ನಿಂತಿರುವಂತೆಯೇ ಒಬ್ಬ ವ್ಯಕ್ತಿ ಪ್ರವೇಶಿಸುವನು. ನೋಡಿದರೆ ಭಕ್ತನೆಂದು ಗೊತ್ತಾಗುವುದು. ತಲೆಯ ಮೇಲೆ ಒಂದು ಬುಟ್ಟಿ; ಅದರಲ್ಲಿ ಊಟ, ಕೈಯಲ್ಲಿ ಚೆಂಬಿನಲ್ಲಿ ನೀರು, ಕಂಕುಳಲ್ಲಿ ಚಾಪೆ, ಹಾಸುವ ಬಟ್ಟೆ. ಅವನು ಮಿಠಾಯಿ ಮಾರುವವನು.)

ಮಿಠಾಯಿ ಮಾರುವವನು : (ಸ್ವಗತ) ಹೌದು, ಹೌದು, ಇವರೇ, ಇವರೇ ಬಾಬಾಜಿ! (ದೀರ್ಘದಂಡ ಪ್ರಣಾಮ ಮಾಡುವನು). (ಪ್ರಕಾಶ) ಸ್ವಾಮಿಜಿ, ಬನ್ನಿ, ಬನ್ನಿ, ಕೈತೊಳೆದು ಊಟ ಮಾಡಿ.

(ದರಿಯನ್ನು ಹಾಸುವನು)

ವಿವೇಕಾನಂದರು : ಅಪ್ಪಾ, ನೀನು ಇನ್ನಾರಿಗೋ ಊಟ ತಂದು ನಾನೇ ಅವರೆಂದು ತಪ್ಪು ತಿಳಿದಿರಬೇಕು, ಸರಿಯಾಗಿ ಹುಡುಕು; ನಿನ್ನ ವಿಶ್ವಾಸಕ್ಕೆ ವಂದನೆ.

ಮಿಠಾಯಿ ಮಾರುವವನು : ಇಲ್ಲ, ಇಲ್ಲ, ಬಾಬಾಜಿ. ಖಂಡಿತವಾಗಿ ನಾನು ಹುಡುಕಿಕೊಂಡು ಬಂದಿದ್ದು ನಿಮ್ಮನ್ನೇ. ನೀವು ದಯವಿಟ್ಟು ಊಟ ಮಾಡಿ. ಬಹಳ ಹಸಿದಿರಬೇಕು. ಬೇಕಾದರೆ ಮೊದಲು ಸ್ವಲ್ಪ ನೀರು ಕುಡಿಯಿರಿ.

(ಬನಿಯನು ಬೆಪ್ಪನಂತೆ ನೋಡುತ್ತಿರುವನು)

ವಿವೇಕಾನಂದರು : ನನಗೊಂದೂ ಅರ್ಥವಾಗುತ್ತಿಲ್ಲ, ನೀನು ಇನ್ನೊಮ್ಮೆ ನಿನ್ನವರನ್ನು ಸರಿಯಾಗಿ ಹುಡುಕು.

ಮಿಠಾಯಿಯವನು : ಇಲ್ಲ ಸ್ವಾಮೀಜಿ. ಶ್ರೀರಾಮನು ಕನಸಿನಲ್ಲಿ ತೋರಿದ್ದು ನಿಮ್ಮನ್ನೇ! ನಾನೊಬ್ಬ ಈ ಊರಿನಲ್ಲಿ ಮಿಠಾಯಿ ಮಾರುವವನು. ಇಂದು ನಾನು ಎಂದಿನಂತೆ ಮಿಠಾಯಿ ಮಾರಿ, ಮಧ್ಯಾಹ್ನ ವಿಶ್ರಾಂತಿಗೆಂದು ಮಲಗಿದ್ದೆ. ಆಗ ಕನಸಿನಲ್ಲಿ ಶ್ರೀರಾಮದೇವರು ಬಂದು ನನ್ನೊಡನೆ "ನೋಡು, ನನ್ನ ಭಕ್ತ ಹಸಿದು ಬಾಯಾರಿಕೆಯಿಂದ ಇದ್ದಾನೆ. ನೀನು ತಕ್ಷಣವೇ ಪೂರಿ, ಪಲ್ಯ, ಸ್ವಲ್ಪ ಸಿಹಿ ತಿಂಡಿ ಮತ್ತು ನೀರನ್ನು ತೆಗೆದುಕೊಂಡು ತಾರೀಘಾಟ್ ಸ್ಟೇಷನ್ನಿಗೆ ಹೋಗು" ಎಂದು ಆಜ್ಞೆ ಮಾಡಿದರು. ನಾನು ಕನಸೆಂದು ಅಲಕ್ಷಿಸಿ ಪಕ್ಕಕ್ಕೆ ಹೊರಳಿ ಮಲಗಿದೆ. ಈ ಸಾರಿ ಶ್ರೀರಾಮದೇವರು ಮತ್ತೆ ಕಾಣಿಸಿಕೊಂಡು ನನ್ನನ್ನು ಜೋರಾಗಿ ಅಲುಗಾಡಿಸಿ, "ಏನು, ಇನ್ನೂ ಹೋಗಿಲ್ಲವೇ? ತಕ್ಷಣ ಹೊರಡು" ಎಂದು ಆದೇಶವಿತ್ತರು. ತಕ್ಷಣವೇ ನಾನು ಸ್ವಲ್ಪ ಪೂರಿ ಪಲ್ಯ ಮಾಡಿ, ಸ್ವಲ್ಪ ಸಿಹಿ ತಿಂಡಿಯನ್ನೂ, ನೀರನ್ನೂ ತೆಗೆದುಕೊಂಡು, ಇಲ್ಲಿಗೆ ಬಂದೆ.

(ಕೇಳುತ್ತಾ ಕೇಳುತ್ತಾ ವಿವೇಕಾನಂದರ ಕಣ್ಣಲ್ಲಿ ನೀರು ಹರಿಯುವುದು).

ವಿವೇಕಾನಂದರು : ಅಪ್ಪಾ! ನೀನೆಷ್ಟು ಒಳ್ಳೆಯವನು !

ಮಿಠಾಯಿಯವನು : ಇಲ್ಲ, ಇಲ್ಲ, ಸ್ವಾಮಿಜಿ, ನೀವಲ್ಲ ಕೃತಜ್ಞತೆ ಹೇಳಬೇಕಾಗಿರುವವರು! ಅದು ನಾನು ಹೇಳಬೇಕದದ್ದು. ನಿಮ್ಮಿಂದ ನನಗೆ ಶ್ರೀರಾಮನ ದರ್ಶನವಾಯಿತು. ಭಗವಂತನ ಕೃಪೆಯಿಂದ ತಮ್ಮಂಥ ಮಹಾತ್ಮರಿಗೆ ಅಲ್ಪ ಸೇವೆ ಮಾಡುವ

ಅವಕಾಶ ದೊರೆಯಿತು.

(ಬನಿಯನು ಓಡಿ ಬಂದು ವಿವೇಕಾನಂದರ ಪಾದಗಳನ್ನು ಹಿಡಿದುಕೊಳ್ಳುವನು)

ಬನಿಯ : ಸ್ವಾಮೀಜಿ, ನಾನು ಮೂರ್ಖ, ತಮ್ಮಂತಹ ಮಹಾತ್ಮರನ್ನು ನಾನು ಎಷ್ಟು ಹೀಯಾಳಿಸಿದೆ. ಕ್ಷಮಿಸಿ, ಸ್ವಾಮಿಜಿ, ಕ್ಷಮಿಸಿ! ದೇವರು ಇದ್ದಾನೆ, ತನ್ನ ಭಕ್ತರನ್ನು ಕಾಪಾಡುತ್ತಾನೆ ಎಂದು ನೀವು ತೋರಿಸಿಯೇಬಿಟ್ಟಿರಿ.

(ಕಣ್ಣೀರು ಸುರಿಸುವನು)

ವಿವೇಕಾನಂದರು : ಅಪ್ಪಾ ಏಳು, ನೀನು ಹೀಯಾಳಿಸಿದುದಕ್ಕೆ ನಿನ್ನ ಮೇಲೆ ನನಗೇನೂ ಕೋಪವಿಲ್ಲ. ಅದೂ ಭಗವಂತನ ಇಚ್ಛೆ; ಆದರೆ, ಸಾಧುಗಳನ್ನು ಗೌರವಿಸುವ ನಮ್ಮ ಭಾರತ ದಲ್ಲಿಯೂ ಇಂತಹ ಅಭಿಪ್ರಾಯಗಳು, ಅಜ್ಞಾನ ತುಂಬಿವೆಯಲ್ಲಾ ಎಂಬುದೇ ನನ್ನ ಚಿಂತೆ. ಸಂನ್ಯಾಸಿಗಳು ಸಮಾಜದ ಬೆಳಕು, ಅವರು ತಾವೂ ಸಾಧನೆಯಲ್ಲಿ ಮುಂದುವರೆದು ಸಮಾಜಕ್ಕೂ ಸೇವೆ ಸಲ್ಲಿಸುವ ಆದರ್ಶವನ್ನು ಹೊಂದಿರುತ್ತಾರೆ.

ಬನಿಯ : ಸ್ವಾಮಿಜಿ, ನೀವು ನನ್ನ ಕಣ್ತೆರೆಸಿದಿರಿ. ನಾನು ಇನ್ನು ಮುಂದೆ ಬುದ್ಧಿ ಕಲಿಯುತ್ತೇನೆ. ನನ್ನ ಅಜ್ಞಾನ, ಅಹಂಕಾರವೆಲ್ಲ ಮುರಿಯಿತು.

(ಮತ್ತೆ ಸಾಷ್ಟಾಂಗ ನಮಸ್ಕಾರ ಮಾಡುವನು. ಮಿಠಾಯಿಯವನೂ ಇನ್ನಿತರರೂ ಸ್ವಾಮೀಜಿಯವರಿಗೆ ನಮಸ್ಕರಿಸುವರು)

(ಹಿನ್ನೆಲೆಯಲ್ಲಿ ಹಾಡು ತೇಲಿಬರುವುದು)

ಬ್ರಹ್ಮವಿದ್ಯೆಯ ದಿವ್ಯದೀಪ್ತಿಯ ದೇಶದೇಶದಲಿ
ಹರಡಿ, ಅಭಯವನೀಯುತಮೃತವ ಸುರಿದು ಪಾಲಿಸಿದೆ ।
ಗಗನಕೆತ್ತಿದೆ ಭಾರತಾಂಬೆಯ ಕೀರ್ತಿಕೇತನವ
ಓಜೆ ತುಂಬಿಹುದಾರ್ಯಮಾತೆಯ ಶ್ರೀನಿಕೇತನವ ॥
ನಿನ್ನ ಹೆಸರದೆ ಶಕ್ತಿಯೀಯುವ ದಿವ್ಯತರ ಮಂತ್ರ
ನಿನ್ನ ಮಾರ್ಗವೆ ಮುಕ್ತಿದಾಯಕವಾದ ವರ ಮಾರ್ಗ ।
ನಮ್ಮ ಹೃದಯಕೆ ಹೃದಯ ನೀನಯ್, ಶಕ್ತಿಸಾಗರನೆ
ಯಮನ ನುಂಗಿದ ರಾಜಯೋಗಿಯೆ, ರುದ್ರ ಸಂನ್ಯಾಸಿ ॥
ನಿನ್ನ ಧೈರ್ಯ ಸ್ಥೈರ್ಯ ದೃಢತೆಯು, ನಿನ್ನ ಪವಿಶಕ್ತಿ
ಭಾರತೀಯರಿಗಿಂದು ಬೇಕಾಗಿಹುದು ದಿವ್ಯಾತ್ಮ ।
ರುದ್ರ ನರ್ತನವೆಸಗು ಹೃದಯದಿ, ಬುದ್ಧಿ ಭೈರವನೇ
ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರ ಹೃದಯಗಳು ॥

✪

## ಪ್ರಹಸನ ಪ್ರಸಂಗ

▣ ಸಾಕ್ರಟೀಸನು ಓರ್ವ ಅಸಾಧಾರಣ ದಾರ್ಶನಿಕ. ಒಮ್ಮೆ ರೋಮ್ ನಗರದ ನಿವಾಸಿಗಳು ಅಥೆನ್ಸಿನ ದೇವಾಲಯದ ಪೂಜಾರಿಯ ಬಳಿ ಹೋಗಿ ಅಥೆನ್ಸಿನಲ್ಲಿ ವಾಸಿಸುವ ಜನಗಳಲ್ಲಿ ಅತ್ಯಂತ ಮೇಧಾವಿ ವ್ಯಕ್ತಿ ಯಾರೆಂದು ಕೇಳಿದಾಗ ಪೂಜಾರಿಯು ಸಾಕ್ರಟೀಸನ ಹೆಸರನ್ನು ಹೇಳಿದನು. ವಿಷಯ ತಿಳಿದ ಕೂಡಲೇ, ಅಥೆನ್ಸಿನ ನಿವಾಸಿಗಳು ಸಾಕ್ರಟೀಸನ ಮನೆಗೆ ಹೋಗಿ, ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತ ಹೇಳಿದರು: "ಸಾಕ್ರಟೀಸ್, ನೀನು ಅಥೆನ್ಸಿನಲ್ಲಿ ವಾಸಿಸುವ ಜನಗಳಲ್ಲಿ ಬಹಳ ಮೇಧಾವಿ ಎಂದು ಗೊತ್ತಾಯಿತು. ನಿನಗೆ ಅಭಿನಂದನೆಗಳು." ಸಾಕ್ರಟೀಸನು ಅದಕ್ಕುತ್ತರವಾಗಿ, "ಹೌದು ಹೌದು. ಅದು ನನಗೆ ಗೊತ್ತು." ಇಂತಹ ಉತ್ತರದಿಂದ ಆಶ್ಚರ್ಯಗೊಂಡ ಅಲ್ಲಿ ನೆರೆದಿದ್ದ ಜನರಿಗೆ ಸಾಕ್ರಟೀಸನ ಅಹಂಕಾರದ ಬಗ್ಗೆ ಅಸಮಾಧಾನವಾಯಿತು. ಇದನ್ನು ಗಮನಿಸಿದ ಸಾಕ್ರಟೀಸನು ಮತ್ತೆ ಹೇಳಿದ: "ಪ್ರಿಯ ಬಂಧುಗಳೇ, ನನಗೇನೂ ಗೊತ್ತಿಲ್ಲವೆಂದು ನನಗೆ ಚೆನ್ನಾಗಿ ಗೊತ್ತು." ಬಂದಿದ್ದ ಜನ ಸಾಕ್ರಟೀಸನ ಉತ್ತರವನ್ನು ಕೇಳಿ ಅವನಲ್ಲಿದ್ದ ವಿವೇಕ ಹಾಗೂ ವಿನಯವನ್ನು ಶ್ಲಾಘಿಸಿದರು.

▣ ಐನ್‌ಸ್ಟೈನ್ ಪ್ರಪಂಚದ ಅತ್ಯಂತ ಮೇಧಾವಿ ವಿಜ್ಞಾನಿಯಷ್ಟೇ ಅಲ್ಲ, ದಾರ್ಶನಿಕನೂ ಕೂಡ. ಅವರು ತಾವು ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತದ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದರು: "ನನ್ನ ಸಾಪೇಕ್ಷ ಸಿದ್ಧಾಂತ ಜಗತ್ತಿನ ಎಲ್ಲರ ಮನ್ನಣೆ ಪಡೆದಿದೆ. ಸಂತೋಷ. ಅಮೆರಿಕ ದೇಶದ ಜನರು ನನ್ನನ್ನು ತಮ್ಮ ದೇಶದ ವಿಜ್ಞಾನಿ ಎಂದು ಘೋಷಿಸಿ ಕೊಂಡಾಡುತ್ತಾರೆ. ಜರ್ಮನಿಯ ನಿವಾಸಿಗಳು ನನ್ನನ್ನು ಅವರ ದೇಶದಲ್ಲಿ ಹುಟ್ಟಿ ಬೆಳೆದ ವಿಜ್ಞಾನಿ ಎಂದು ಘೋಷಿಸಿ ಕೊಂಡಾಡುತ್ತಾರೆ. ಅದೇ ಒಂದು ವೇಳೆ, ನಾನು ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತ ಸುಳ್ಳಾಗಿದ್ದರೆ, ಅಮೆರಿಕನ್ನರು ನನ್ನನ್ನು ಜರ್ಮನಿಯವನು ಎಂದೂ, ಜರ್ಮನ್ನರು ನನ್ನನ್ನು ಯೆಹೂದಿಯೆಂದೂ ಕರೆಯುತ್ತಿದ್ದರು.

▣ ಜಾರ್ಜ್ ಬರ್ನಾರ್ಡ್ ಷಾ ಮತ್ತು ಜಿ.ಕೆ. ಚೆಸ್ಟರ್‌ಟನ್ ತಮ್ಮ ತಮ್ಮ ದೇಹಗಳ ಬಗ್ಗೆ ಮಾತನಾಡುತ್ತಿದ್ದರು. ಷಾ ಅವರು ತೆಳ್ಳಗೆ ನೀಳವಾಗಿದ್ದರು. ಚೆಸ್ಟರ್‌ಟನ್ ಅವರು ಕುಳ್ಳಗೆ ದಪ್ಪವಾಗಿದ್ದರು. ಚೆಸ್ಟರ್‌ಟನ್ ಅವರು ಷಾ ಅವರನ್ನು ಕುರಿತು, "ಷಾ ಅವರೇ, ನಿಮ್ಮ ತೆಳ್ಳನೆಯ ದೇಹವನ್ನು ನೋಡಿದ ಜನರು ಇಂಗ್ಲೆಂಡ್ ದೇಶವು ಕ್ಷಾಮದಿಂದ ಬಳಲುತ್ತಿರಬಹುದು ಎಂದು ಭಾವಿಸುತ್ತಾರೆ" ಎಂದು ಅಣಕವಾಡಿದರು. ಇದಕ್ಕೆ ಷಾ ಅವರು ಸುಮ್ಮನಿರದೆ, ಚೆಸ್ಟರ್‌ಟನ್ ಅವರಿಗೆ ಹೀಗೆ ಉತ್ತರಿಸಿದರು: "ಚೆಸ್ಟರ್‌ಟನ್ ಅವರೇ, ಇಂಗ್ಲೆಂಡ್ ದೇಶವು ಕ್ಷಾಮದಿಂದ ಪರಿಪೀಡಿತವಾಗಿರುವುದಕ್ಕೆ ಏನು ಕಾರಣ ಎಂದು ನಿಮ್ಮ ಧಡೂತಿ ದೇಹಾಕೃತಿಯನ್ನು ನೋಡಿದ ಕೂಡಲೆ ಗೊತ್ತಾಗುತ್ತದೆ!"

ಸಂಗ್ರಹ: ಎನ್. ಗೋಪಾಲ್ ✪